ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಯ ಬೆಳಗಾಂ ಕಾರ್ಯ ಮತ್ತು ಪಾಲನಾ ವೃತ್ತ ಹಾಗೂ ಶಿರಸಿ ಕಾರ್ಯ ಮತ್ತು ಪಾಲನಾ ವಿಭಾಗದಲ್ಲಿ ಬಾಕಿ ಇರುವ ಹಣ

508 ಎ-ಶ್ರೀ ಕೆ.ಸಿ. ಮೆಡಗೇಕರ್ ದೇಸಾಯಿ (ಹಿರೇಬಾಗೇವಾಡಿ): ಮಾನ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಬೆಳಗಾಂ ಕಾರ್ಯ ಮತ್ತು ಪಾಲನಾ ವೃತ್ತ ಹಾಗೂ ಶಿರಸಿ ಕಾರ್ಯ ಮತ್ತು ಪಾಲನಾ ವಿಭಾಗಗಳಲ್ಲಿ ಸರ್ಕಾರಿ ಸ್ಥಾವರಗಳಿಂದ ಮತ್ತು ಖಾಸಗಿ ಸ್ಥಾವರಗಳಿಂದ 1991-92 ಹಾಗೂ 199-93ರ ಅವಧಿಗಳಲ್ಲಿ ಬಾಕಿಯಿರುವ ಹಣದ ಮೊತ್ತವೆಷ್ಟು?

ಆ) ಇದನ್ನು ವಸೂಲಿ ಮಾಡಲು ಸರ್ಕಾರವು ತೆಗೆದುಕೊಂಡ ಕ್ರಮವೇನು?

ಶ್ರೀ ಕೆ.ಎ. ನಿಸಾರ್ ಅಹಮದ್ (ಇಂಧನ ರಾಜ್ಯ ಸಚಿವರು):

ಅ) ವಾರ್ಷಿಕ ವಿವರಗಳು ಈ ಕೆಳಕಂಡಂತಿವೆ.

ಲಕ್ಷ ರೂಪಾಯಿಗಳಲ್ಲಿ

ಸರ್ಕಾರೀ ಸ್ಥಾವರಗಳಿಂದ

	1991-92	92-93
ಬೆಳಗಾಂ ವೃತ್ತ	1142.44	616.71
ಶಿಸಿ ವಿಭಾಗ	1.14	1.47

ಖಾಸಗೀ ಸ್ಥಾವರಗಳಿಂದ

	1991-92	92-93
ಬೆಳಗಾಂ ವೃತ್ತ	1648.33	1823.46
ಶಿರಸಿ ವಿಭಾಗ	239.91	353.65

ಆ) ಬಾಕಿಯಿರುವ ಹಣವನ್ನು ವಸೂಲು ಮಾಡಲು ಮಂಡಳಿಯು ಕ.ವಿ.ಮ (ಬಾಕಿ ವಸೂಲಾತಿ) ಕಾಯಿದೆ 1976 ಮತ್ತು ಕ.ವಿ.ಮಂ. (ಬಾಕಿ ವಸೂಲಾತಿ) ನಿಯಮಗಳು 1978 ಇವುಗಳಲ್ಲಿ ನಮೂದಿಸಿರುವ ಪ್ರಕಾರ ಸೂಕ್ತವಾದ ಕ್ರಮ ತೆಗೆದುಕೊಳ್ಳುತ್ತಿದೆ.

ತೊರೆಕಾಡನಹಳ್ಳಿಯಲ್ಲಿ ವಿದ್ಯುತ್ ಸ್ವೀಕರಣ ಕೇಂದ್ರದ ನಿರ್ಮಾಣ

685 - ಶ್ರೀ ಕೆ.ಎಂ. ಪುಟ್ಟು (ಕಿರುಗಾವಲು): ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಡ್ಯ ಜಿಲ್ಲೆ ಮಳವಳ್ಳಿ ತಾಲ್ಲೂಕು ತೊರೆಕಾಡನ ಹಳ್ಳಿಯಲ್ಲಿ ಹಮ್ಮಿಕೊಂಡಿರುವ 220 ಕಿಲೋವ್ಯಾಟ್ ವಿದ್ಯುತ್ ಸ್ವೀಕರಣ ಕೇಂದ್ರದ ನಿರ್ಮಾಣ ಕಾರ್ಯವು ಯಾವ ಹಂತದಲ್ಲಿದೆ?

ಆ) ಈ ಕೆಲಸವನ್ನು ಯಾವಾಗ ಪೂರ್ಣಗೊಳಿಸಲಾಗುವುದು?

ಶ್ರೀ ಎಸ್.ಎಂ. ಕೃಷ್ಣ (ಉಪಮುಖ್ಯಮಂತ್ರಿಗಳು):

ಅ) ಮಂಡ್ಯ ಜಿಲ್ಲೆ ಮಳವಳ್ಳಿ ತಾಲ್ಲೂಕು ತೊರೆಕಾಡನ ಹಳ್ಳಿಯಲ್ಲಿ 220.66 ಕೆ.ವಿ. ವಿದ್ಯುತ್ ಸ್ವೀಕರಣಾ ಕೇಂದ್ರದ ನಿರ್ಮಾಣ ಕಾರ್ಯವು ಪೂರ್ಣಗೊಂಡಿದೆ ಮತ್ತು ಸದರೀ ವಿದ್ಯುತ್ ಸ್ವೀಕರಣಾ ಕೇಂದ್ರವು ತನ್ನ ಪೂರ್ಣ ಸಾಮರ್ಥ್ಯದಲ್ಲಿ 2-10-92 ರಿಂದ ಕಾರ್ಯ ನಿರ್ವಹಿಸುತ್ತಿದೆ.

ಆ) ಪ್ರಶ್ನೆಯ 'ಅ' ಭಾಗಕ್ಕೆ ನೀಡಿರುವ ಉತ್ತರದಿಂದ ಇದು ಉದ್ಭವಿಸುವುದಿಲ್ಲ.